XIV ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) ಮಾನ್ಯ ಅಧ್ಯಕ್ಷರೆ ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಮಂತ್ರಿ)ಅವರ ಪರವಾಗಿ 1956ರ ಕಂಪನಿಗಳ ಕಾಯ್ದೆಯ 619)(ಎ)ಪ್ರಕರಣದ ಮೇರೆಗೆ. 1997-98 ನೇ ಸಾಲಿನ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು :- ಎಲ್ಲಾ ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

4. ಸದನದಲ್ಲಿ ಸಚಿವರುಗಳ ಕಡಿಮೆ ಹಾಜರಾತಿ ಕುರಿತು

ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕ): ಮಾನ್ಯ ಉಪಾಧ್ಯಕ್ಷರೆ, ಇದು ನನಗೆ ಅರ್ಥವಾಗುವುದಿಲ್ಲ ಇದು ಎರಡನೆಯ ದಿವಸ.

ಶ್ರೀ ವಾಟಾಳ್‌ನಾಗಾರಾಜ್ : ಇಂತಹ ಮಂತ್ರಿಗಳ ಪರವಾಗಿ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ ಎನ್ನುವುದು ನಿತ್ಯ ಮಂತ್ರವಾಗಿ ಹೋಯಿತು. ಅರೆ ಶಿವಾ, ಇದೇನು ಹೀಗಾಗುತ್ತಿದೆ? ಇದೇನು ಹುಡುಗಾಟನಾ? ಈ ರಾಜ್ಯದ ಜನತೆಗಾದರೂ ನೀವು ಹೆದರುವುದಿಲ್ಲವೇನು? ಈ ಸದನದಲ್ಲಿ ನೀವು ಇಚ್ಛೆ ಬಂದ ಹಾಗೆ ಮಾತನಾಡುತ್ತೀರಿ. ಇಷ್ಟೊಂದು ಬೇಜವಾಬ್ದಾರಿ ತೆಗೆದು ಕೊಳ್ಳಬಾರದು.

ಉಪಾಧ್ಯಕ್ಷರು: ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈಗ ಏನಾಗಿದೆ ಅಂದರೆ ತಾವು ಸಲಿಗೆ ಕೊಟ್ಟಷ್ಟು ಅದನ್ನು ಅವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮನುಷ್ಯನಿಗೆ ಏನಾದರೂ ಒಂದು ಸಾರಿ ಅಂದರೆ ಮನಸ್ಸಿಗೆ ನೋವಾಗುತ್ತದೆ. ಇವರಿಗೆ ನೋವು ಏಕೆ ಆಗುವುದಿಲ್ಲ ? ಫೀಲಿಂಗ್ಸ್ ಇವರಿಗೆ ಏಕೆ ಆಗುವುದಿಲ್ಲ ? ಇದು ನನಗೆ ಅರ್ಥನೇ ಆಗುವುದಿಲ್ಲ. ಸ್ವಲ್ಪವಾದರೂ ಏನಾದರೂ ಅನ್ನುತ್ತಾರೆ ನಾವು ಜನರಿಗೆ ಮುಖ ತೋರಿಸಬೇಕು. ದಿನಾ ಪತ್ರಿಕೆಗಳಲ್ಲಿ ಸದನದಲ್ಲಿ ಮಂತ್ರಿಗಳು ಇಲ್ಲ ಇಲ್ಲವೆಂದು ಬರುತ್ತದೆ ಎಂಬುದೂ ಇವರಿಗೆ ಅರ್ಥವಾಗುತ್ತಿಲ್ಲ. ಒಂದು ದಿನ ಇಲ್ಲ ಕನಿಷ್ಟ ಪಕ್ಷ ಎರಡನೆಯ ದಿವಸವಾದರೂ ಮಂತ್ರಿಗಳು ಇರಬೇಕಲ್ಲಾ. ಕೌನ್ಸಿಲ್‌ನಲ್ಲಿ ಇದ್ದಾರೆಂದರೆ ಇದು ಬಹಳ ಮುಖ್ಯವಾದುದು.

ಶ್ರೀ ವಾಟಾಳ ನಾಗರಾಜ್ : ಇದು ಎಮ್ಮೆ ಚರ್ಮದ ಸರ್ಕಾರ.

Sri Mallikarjuna Kahrge : This House is most important. This is the main house which creates that house. Tomorrow if we pass a resolution that house will be abolished.

ಶ್ರೀ ಡಿ. ಮಂಜುನಾಥ : ಕೌನ್ಸಿಲ್‌ನಲ್ಲಿ ಅವರದ್ದು ಬಿಸಿನೆಸ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇರಬಹುದು. ಅಲ್ಲಿ ಎಷ್ಟು ಜನ ಇದ್ದಾರೆ? ನೀವು ಓದಿದರಲ್ಲಾ ಅವರೆಲ್ಲರೂ ಅಲ್ಲಿದ್ದಾರೆಯೆ? ಆಗಲಿ, ಅಲ್ಲಿ ಎಷ್ಟು ಜನ ಅಲ್ಲಿದ್ದಾರೆಂದು ನೋಡೋಣ ಯಾರನ್ನಾದರೂ ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುತ್ತಿಲ್ಲ. ಅದಕ್ಕೆ ಕಾರಣವೇನೆಂದು ಕೇಳುತ್ತಿದ್ದೇನೆ. ಅವರಿಗೆ ಹುಷಾರಿಲ್ಲವೆಂದು ಹೇಳುತ್ತಿದ್ದಾರೆ. ಯಾರನ್ನೂ ಮನೆಗೆ ಬಿಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಕಾರಣವೇನು? ಹುಷಾರಿಲ್ಲವೆನ್ನುವುದಕ್ಕೆ ಏನು ಕಾರಣವೆಂದು ಸರ್ಕಾರದ ಪರವಾಗಿ ಯಾರಾದರೂ ಹೇಳಬೇಕಲ್ಲ. ಮುಖ್ಯಮಂತ್ರಿಗಳು ಈ

ಸದನಕ್ಕೆ ಬರುತ್ತಿಲ್ಲ. ಈ ಸದನ ಆರಂಭವಾಯಿತು. ಆರಂಭವಾದಾಗಿನಿಂದ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುತ್ತಿಲ್ಲ. ಆದ್ದರಿಂದ ಅದರ ಬಗ್ಗೆ ಏನು ಹೇಳಿದ್ದಾರೆ ಅದನ್ನು ನಮಗೆ ತಿಳಿಸಿ. ಅದನ್ನು ನಮಗೆ ತಿಳಿಸಬೇಕಾಗುತ್ತದೆ. ಮುಖ್ಯಮಂತ್ರಿಗಳು ಈ ಕಾರಣದಿಂದ ಸದನಕ್ಕೆ ಬರುತ್ತಿಲ್ಲ ನಮಗೆ ತಿಳಿಸಿದ್ದಾರೆ ಅಧ್ಯಕ್ಷರಿಗೆ ತಿಳಿಸಿದ್ದಾರೆ ಏನಾದರೂ ಒಂದು ಕಾರಣ ಇರಬೇಕಲ್ಲಾ. ಯಾವುದೂ ನಮಗೆ ಗೊತ್ತಿಲ್ಲ. ನಾವು ಒಂದು ತರಹ ಕತ್ತಲಿನಲ್ಲಿದ್ದೇವೆ. ಈ ರಾಜ್ಯದ ಮುಖ್ಯಮಂತ್ರಿಗಳು ಬಜೆಟ್ ಅಧಿವೇಶನ ಎರಡನೆಯ ಅಧಿವೇಶನ ಆರಂಭವಾದಾಗ ಮುಖ್ಯಮಂತ್ರಿಗಳು ಸಭೆಯಲ್ಲಿರಬೇಕಾದ್ದು ಅವರ ಕರ್ತವ್ಯ . ಅದರ ಜೊತೆಗೆ ಸಚಿವ ಸಂಪುಟದ ಸಭೆಯೂ ಸಹ ನಡೆಯುತ್ತಿಲ್ಲ. ಮನೆಯಲ್ಲಿ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಹೋದರೆ ಯಾರನ್ನೂ ಬಿಡುತ್ತಿಲ್ಲ. ಉದ್ದೇಶವೇನು ಎಂಬುದನ್ನು ತಾವು ಪ್ರಾಮಾಣಿಕವಾಗಿ ಈ ಸದನಕ್ಕೆ ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಯಾರಾದರೂ ಒಬ್ಬರು ಅವರ ಸಚಿವಸಂಪುಟದ ಸದಸ್ಯರು ಮುಖ್ಯಮಂತ್ರಿಗಳು ಯಾವಾಗ ಬರುತ್ತಾರೆನ್ನುವುದನ್ನು ಅವರಿಗೆ ಏನು ಹುಷಾರಿಲ್ಲ ಅದಕ್ಕೆ ಏನು ಕಾರಣ ಎಂಬುದನ್ನು ತಿಳಿಸಬೇಕು. ನಾವು ಸುಮ್ಮನೆ ಕಗ್ಗತ್ತಲಿನಲ್ಲಿ ಕುಳಿತಿದ್ದೇವೆ. ಇದರ ಬಗ್ಗೆ ತಾವು ಯಾರಾದರೂ ತಿಳಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ : (ಗೃಹ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪ್ರವಾಸ ಮಾಡಿದ ಮೇಲೆ ಆಯಾಸದ ಮೇಲೆ ಜ್ವರ ಬಂದಿದೆ. ಜ್ವರ ಬಿಟ್ಟ ನಂತರ ಅವರು ಸದನಕ್ಕೆ ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳಿಗೆ ಅಧಿವೇಶನ ಮೊದಲನೆಯ ದಿವಸವೇ ಜ್ವರ ಬಂದಿದೆ. ಅನೇಕ ಸಚಿವರು ತಮ್ಮ ತಮ್ಮ ಕೆಲಸದಲ್ಲಿ ಬಹಳ ಬಿಜಿ ಇದ್ದಾರೆ. ಇದು ಏನಾಗಿದೆಯೆಂದರೆ ಲಾಸ್ಟ್ ಹಾರ್ವೆಸ್ಟಿಂಗ್ ಸೀಸನ್ ಇದ್ದಹಾಗೆ. ಯಾರೂ ಇರುವುದೇ ಇಲ್ಲ ಹಾರ್ವೆಸ್ಟ್ ಸೀಸನ್‌ನಲ್ಲಿ ಜನ ರಾಶಿ ಮಾಡುವುದಕ್ಕೆ ಹೇಗೆ ಹೋಗುತ್ತಾರೆ ಜನ ಹಾಗೆ ಎಲ್ಲಾ ಮಂತ್ರಿಗಳು ಅಲ್ಲಿ ಇಲ್ಲಿ ಅಡ್ಡಾಡುತ್ತಾರೆ. ನಾವು ದಿನಾ ಕೇಳಿದರೂ ಯಾರೂ ಮಂತ್ರಿಗಳು ಇಲ್ಲಿ ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದು ಕಡೆ ಯಾವ ಮಂತ್ರಿಗಳೂ ಸದನಕ್ಕೆ ಗೌರವ ಕೊಡುತ್ತಿಲ್ಲ. ಎರಡನೆಯದಾಗಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಬರುವುದೇ ಇಲ್ಲ. ಅವರವರುಗಳ ಬೇಡಿಕೆಗಳು ಇದ್ದಾಗ ಸಹ ಬರುವುದಿಲ್ಲ. ಇದೊಂದು ತರಹ ಸದನವನ್ನು ಕಡೆಗಾಣಿಸಿ ಯಾವುದೋ ಒಂದು ರೀತಿ ಎಲ್ಲೋ ಯಾವುದೋ ಒಂದು ಅರಳೀಮರದ ಕೆಳಗೆ ಸಭೆ ಸೇರಿದ ಹಾಗೆ ಇರುತ್ತದೆ ಎನ್ನುವ ರೀತಿಯಲ್ಲಿ ಆಡಳಿತ ಪಕ್ಷ ನೋಡಿಕೊಳ್ಳುತ್ತಿದೆ. ಇದು ಒಳ್ಳೆಯ ಸೂಚನೆಯಲ್ಲ. ಅತ್ಯಂತ ಅಪಾಯಕಾರಿ ಬೆಳವಣಿಗೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕೆ ಪ್ರೇತ ಕಳೆ ಬರುತ್ತಿದೆ. ನಿಜವಾಗಲೂ ಅದಕ್ಕೆ ಬೆಲೆಯನ್ನು ಇವರು ತೆರಬೇಕಾಗುತ್ತದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಇದು ಒಳ್ಳೆಯ ಸೂಚನೆಯಲ್ಲ. ಅನೇಕ ಸಾರಿ ತಾವು ತಮ್ಮ ಪೀಠದಿಂದ ಹೇಳಿರತಕ್ಕ ಯಾವ ವಿಚಾರಕ್ಕೂ ಇವರು ಗಮನಕೊಡುತ್ತಿಲ್ಲ. ವಿರೋಧಪಕ್ಷದ ನಾಯಕರು ಮಂಡನೆ ಮಾಡಲಿ ಅವರು. ನಾನೊಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಿಯಮ 60 ರ ಪ್ರಕಾರ ಬಚಾವತ್ ಆಯೋಗದ ತೀರ್ಪಿನಂತೆ ಕೃಷ್ಣಾ ಕಣಿವೆ ನೀರನ್ನು ಮೇ 2000 ದ ಇಸವಿಯೊಳಗಾಗಿ ನಮ್ಮ ರಾಜ್ಯ ಬಳಸಿಕೊಳ್ಳತಕ್ಕದ್ದು ಇದೆ.

ಉಪಾಧ್ಯಕ್ಷರು: ಮಾನ್ಯ ನಾಗರಾಜ್‌ರವರೆ, ಅವರದು ಆದಮೇಲೆ ನಿಮ್ಮದು ಎರಡನೆಯದು. ಅವರದು ಮುಗಿದ ತಕ್ಷಣ ತಮ್ಮದು ಎಂದು ನಾನು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಚಾವತ್ ಆಯೋಗದ ತೀರ್ಪಿನಂತೆ ಕೃಷ್ಣಾ ನದಿ ನೀರನ್ನು 2000 ದ ಇಸವಿಯೊಳಗಾಗಿ ಬಳಸಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನೀವು ಯಾವಾಗಲಾದರೂ ಅವಕಾಶ ಕೊಡಿ. ಇದು ಆದಮೇಲೆ ನನ್ನದು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೆ ? ಅದನ್ನು ತಾವು ಹೇಳಿ.

ಉಪಾಧ್ಯಕ್ಷರು: ನಾನು ಆಗಲೇ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ದಿವಸದಲ್ಲಿ ಎರಡು ನಿಲುವಳಿ ಸೂಚನೆಯನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು: ನೀವು ಸಂಕ್ಷಿಪ್ತವಾಗಿ ಹೇಳಿ ಮುಗಿಸಿದರೆ ಒಂದೆರಡು ನಿಮಿಷ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಎರಡೇ ನಿಮಿಷ ಸಾಕು ದಯವಿಟ್ಟು ಅವಕಾಶ ಕೊಡಿ.

ಉಪಾಧ್ಯಕ್ಷರು : ಇವರದ್ದು ಆದ ಮೇಲೆ ತಾವು ಎರಡು ನಿಮಿಷದಲ್ಲಿ ಮುಗಿಸಿ ಎಂದು ನಾನು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ನನಗೆ ಅವಕಾಶ ಕೊಟ್ಟಿದ್ದರೆ ನಾನು ಎರಡು ನಿಮಿಷದಲ್ಲಿ ಮುಗಿಸುತ್ತಿದ್ದೆ. ಮೊದಲು ಅವರಿಗೆ ಅವಕಾಶ ಕೊಟ್ಟು ಆಮೇಲೆ ನನಗೆ ಅವಕಾಶ ಕೊಟ್ಟರೆ ಆಮೇಲೆ ನೋಡಿಕೊಳ್ಳೋಣ ಎಷ್ಟು ಹೊತ್ತಿಗೆ ಮುಗಿಸಬೇಕೆಂದು. ನಾನು ಹೇಳುವುದು ಬಹಳ ಪ್ರಾಮುಖ್ಯವಾದ ವಿಚಾರ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಬೆಂಬಲ ಕೊಡುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ಅವರು ತಂದಿರುವ ನಿಲುವಳಿ ಸೂಚನೆಗೆ ನನ್ನದು ಬೆಂಬಲವಿದೆ. ನನಗೆ ಸ್ವಲ್ಪ ಸಹಾಯ ಮಾಡಿ ಸಾರ್ ವಿರೋಧಪಕ್ಷದ ನಾಯಕರು.

ಶ್ರೀಮಲ್ಲಿಕಾರ್ಜುನ ಖರ್ಗೆ: ತಾವು ಆಮೇಲೆ ಹೇಳಿ.

ಶ್ರೀಎಸ್ ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರು ಶೂನ್ಯವೇಳೆಗೆ ಅವಕಾಶ ಇದೆಯೇ ಇಲ್ಲವೇ ಎಂಬುದನ್ನು ತಾವು ಹೇಳಿಬಿಡಿ.

ಶ್ರೀಮಲ್ಲಿಕಾರ್ಜುನ ಖರ್ಗೆ: ಉಪಾಧ್ಯಕ್ಷರೆ, ಇದನ್ನು ನಾನು ಹೇಳಬೇಕೋ ಬೇಡವೋ ಇದೇನು?ತಮ್ಮ ಪರ್ಮಿಷನ್ ತೆಗೆದುಕೊಂಡು ನಾನು ನಿಂತಿದ್ದೇನೆ. ಇಲ್ಲದಿದ್ದರೆ ತಾವು ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟು ಅವರು ಮಾತನಾಡಲಿ.

ಉಪಾಧ್ಯಕ್ಷರು: ತಾವು ಬೇಕಾದರೆ ಬೇಡಿಕೆಗಳ ಮೇಲೆ ಮಾತನಾಡಬಹುದು. ಇವತ್ತು ಶೂನ್ಯವೇಳೆ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ : ನನ್ನದು ಯಾವ ತರಹ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ. ಇನ್ನೇನು ಹೇಳಬೇಕು? ಇವರದು ಮುಗಿದ ತಕ್ಷಣ ತಾವು ಎರಡು ನಿಮಿಷದಲ್ಲಿ ಮುಗಿಸಿ ಎಂದು ನಾನು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಶೂನ್ಯವೇಳೆಗೆ ಅವಕಾಶ ಇದೆಯೋ ಇಲ್ಲವೋ ಎಂಬುದನ್ನು ಹೇಳಿ. ಇವತ್ತು ಕೋಲಾರದ ಜನತೆಗೆ ಬಹಳ ಅನ್ಯಾಯವಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಬೇಕೋ ಬೇಡವೋ. ಮನಸ್ಸಿಗೆ ಬಂದಹಾಗೆ ಮಾತನಾಡಿದರೆ, ಯಾರಿಗೆ ಅರ್ಥವಾಗುತ್ತದೆ? ನಾನು ತಮ್ಮ ಪರ್ಮಿಷನ್ ತೆಗೆದುಕೊಂಡು ನಿಂತಿದ್ದೇನೆ. ತಾವು ಅವರಿಗೂ ಪರ್ಮಿಷನ್ ಕೊಟ್ಟಿದ್ದರೆ ನನ್ನದೇನೂ ಅಭ್ಯಂತರ ಇಲ್ಲ.

ಉಪಧ್ಯಾಕ್ಷರು : ತಾವು ಬೇಡಿಕೆ ಮೇಲೆ ಮಾತನಾಡಬಹುದು. ಇವತ್ತು ಶೂನ್ಯವೇಳೆ ಇಲ್ಲ.

ಶ್ರೀವಾಟಾಳ್ ನಾಗರಾಜ್ : ಸಾರ್ ಹಾಗಾದರೆ ನಾನು ಧರಣಿ ಮಾಡಬೇಕಾಗುತ್ತದೆ. ತಾವು ನನಗೆ ಹೇಳಬೇಕು.

ಉಪಾಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ, ಮುಗಿಸಿದ ತಕ್ಷಣ ತಾವು ಏಳಿ. ಎರಡು ನಿಮಿಷದಲ್ಲಿ ತಾವು ಮುಗಿಸಬೇಕೆಂದು ಹೇಳಿದ್ದೇನೆ.

ಶ್ರೀವಾಟಾಳ್ ನಾಗರಾಜ್ : ನನ್ನ ವಿಷಯವನ್ನು ಯಾವ ತರಹದಲ್ಲಿ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿಬಿಟ್ಟರೆ, ನಾನು ಕುಳಿತುಕೊಳ್ಳತ್ತೇನೆ.

ಉಪಾಧ್ಯಕ್ಷರು : ಈಗಾಗಲೇ ಹೇಳಿದ್ದೇನೆ. ಇನ್ನು ಯಾವ ರೀತಿ ಹೇಳಬೇಕು? ಇವರದು ಮುಗಿದ ತಕ್ಷಣ, ಎರಡು ನಿಮಿಷದಲ್ಲಿ ತಾವು ಮುಗಿಸಿ ಎಂದು ನಾನು ಹೇಳಿದ್ದೇನೆ.

5 ನಿಲುವಳಿ ಸೂಚನೆ

ವಿಷಯ : ಕೃಷ್ಣಾಮೇಲ್ದಂಡೆಯೋಜನೆ ಕಾಮಗಾರಿಗಳು ಸ್ಥಗಿತಗೊಡಿರುವುದು

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಅನಗತ್ಯ ಹೇಳಿಕೆಗಳನ್ನು ಕೊಟ್ಟಿದ್ದರಿಂದ ನೆರೆ ರಾಜ್ಯಗಳು ವಿವಾದವನ್ನುಂಟು ಮಾಡಿ, ಯೋಜನೆಯ ಕಾರ್ಯ ಸ್ಥಗಿತಗೊಳ್ಳುವಂತೆ ಮಾಡಿರುವ ಬಗ್ಗೆ ಚರ್ಚಿಸುವುದು. ಈ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ಈಗಾಗಲೇ ವಿವಾದ ನಡೆದಿದೆ. ಇದು ತಮಗೆ ಗೊತ್ತಿದ್ದಹಾಗೆ 173 ಟಿಎಂಸಿ ನೀರನ್ನು ನಾವು ಈ ಕಣಿವೆಯಿಂದ ಉಪಯೋಗ ಮಾಡಿಕೊಳ್ಳಬೇಕು ಎಂಬ ಸರ್ಕಾರದ ಒಂದು ನಿಲುವು ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಇದು ಪ್ರಮುಖವಾದ ಒಂದು ಅಣೆಕಟ್ಟು. ಇಲ್ಲಿ ಸಂಗ್ರಹಿಸತಕ್ಕ ನೀರು, ತನ್ನ ಪಾಲಿಗಿಂತಲೂ ಹೆಚ್ಚಿನ ನೀರನ್ನು ಸಂಗ್ರಹಿಸುತ್ತಿದ್ದಾರೆ ಎನ್ನತಕ್ಕ ಆಪಾದನೆ ಮೇರೆಗೆ ಆಂಧ್ರಪ್ರದೇಶದವರು ಇದಕ್ಕೆ ಒಂದು ಆಕ್ಷೇಪಣೆಯನ್ನು ಎತ್ತಿದ್ದರು.

ನಂತರ ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರವೂ ಕೂಡ, ಅದೇ ರೀತಿಯಾಗಿ ಆಕ್ಷೇಪಣೆಯನ್ನು ಎತ್ತಿದ್ದರು. ಹೀಗಾಗಿ ಇವೆರಡರ ಮಧ್ಯದಲ್ಲಿ ನಾವೇನು ಎರಡು ಸಾವಿರ ಇಸವಿಯೊಳಗಾಗಿ ನಮ್ಮ ನೀರಿನ ಬಳಕೆಯನ್ನು ಮಾಡಿಕೊಳ್ಳಬೇಕಾಗಿತ್ತು ಅದಕ್ಕೆ ತೊಂದರೆ ಉಂಟಾಗಿದೆ ಮತ್ತು ನಮ್ಮ ಪಾಲಿನ ನೀರನ್ನು ಕಳೆದುಕೊಳ್ಳತಕ್ಕಂತಾದ್ದನ್ನು ಇವತ್ತು ನೋಡುತ್ತಾ ಇದ್ದೇವೆ. ಈ ಪರಿಸ್ಥಿತಿ ಏಕೆ ಉಂಟಾಯಿತು?